

ಆರಿಫ್ ರಾಜಾ



ಕವಿ: **ರೋಜ಼ಾ ಜಮಾಲಿ** (1977)
ದೇಶ: **ಇರಾನ್**

ಲ್ಯಾಟಿನ್ ಅಮೆರಿಕ, ಮಧ್ಯ ಪ್ರಾಚ್ಯ, ಆಫ್ರಿಕಾ ಹಾಗೂ ದಕ್ಷಿಣ ಏಷ್ಯಾ ಸೇರಿದಂತೆ ವಿಶ್ವದ ವಿವಿಧ ಭಾಗಗಳಲ್ಲಿನ ಯುವ ಕವಯಿತ್ರಿಯರನ್ನು ಪರಿಚಯಿಸುವ ಹೊಸ ಮಾಲಿಕೆಯಿದು. ಕವಿಯ ಪುಟ್ಟ ಪರಿಚಯ ಹಾಗೂ ಕಿರು ಸಂದರ್ಶನದೊಡನೆ ಕೆಲವು ಕವಿತೆಗಳನ್ನೂ ಒಳಗೊಳ್ಳುವ ಈ ಮಾಲಿಕೆ, ಕನ್ನಡದ ಓದುಗರಿಗೆ ವಿಶ್ವದ ಬೇರೆ ಬೇರೆ ಭಾಗಗಳ ಕಾವ್ಯದ ಪರಿಮಳವನ್ನು ಪರಿಚಯಿಸಲಿದೆ.

ಸಮಕಾಲೀನ ಪರ್ಷಿಯನ್ ಕಾವ್ಯದ ಕೆಲವು ಪ್ರಭಾವಶಾಲಿ ಹೆಸರುಗಳಲ್ಲಿ ರೋಜ಼ಾ ಜಮಾಲಿಯವರದು ಒಂದು. ರಂಗಭೂಮಿ ಇವರ ಆಸಕ್ತಿಯ ಇನ್ನೊಂದು ಕ್ಷೇತ್ರ. ಗಂಡು ಅಹಮಿಕೆಯನ್ನು ಪ್ರಶ್ನಿಸುವ ಚಿಕಿತ್ಸಕ ನೋಟಕ್ರಮದಿಂದಾಗಿ, ಅಪಾರ ನಾಟಕೀಯಗುಣವುಳ್ಳ ಇವರ ದೀರ್ಘ ಕವಿತೆಗಳಿಗೆ ವಿಶೇಷ ಆಳ-ವ್ಯಾಪ್ತಿ ದಕ್ಕಿದೆ. ರೋಜ಼ಾ ಜಮಾಲಿಯವರ ಪ್ರಮುಖ ಕವನ ಸಂಕಲನಗಳು: This Dead Body is not an Apple, it's either a Cucumber or a Pear (1997), Making Coffee to Write a Crime story (2002), This is not a Persian Script (2023). The Shadow (2014) ಅವರ ಪ್ರಮುಖ ನಾಟಕ. ಪರ್ಷಿಯನ್ ಭಾಷೆಗೆ ಷೇಕ್ಸ್‌ಪಿಯರ್, ಡಬ್ಲ್ಯೂ ಬಿ. ಯೇಟ್ಸ್, ಎಮಿಲಿ ಡಿಕನ್ಸನ್, ಸಿಲ್ವಿಯಾ ಪ್ಲಾತ್ ಅವರ ಕೃತಿಗಳನ್ನು ಅನುವಾದಿಸಿರುವ ರೋಜ಼ಾ ಜಮಾಲಿ, ತೆಹರಾನ್ ಯೂನಿವರ್ಸಿಟಿಯಿಂದ ಜಾಗತಿಕ ರಂಗಭೂಮಿ ಹಾಗೂ ಆಂಗ್ಲ ಸಾಹಿತ್ಯದಲ್ಲಿ ಸ್ನಾತಕ-ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ.